# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1247

ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 17.12.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಸಿಂಧನೂರು ತಾಲ್ಲೂಕಿಗೆ ಒದಗಿಸಲಾಗಿರುವ ಬಸ್ಸುಗಳಲ್ಲಿ ಪ್ರಸ್ತುತ ಎಷ್ಟು ಬಸ್ಸುಗಳು ಚಾಲನೆಯಲ್ಲಿವೆ; | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವ್ಯಾಪ್ತಿಯ ರಾಯಚೂರು ವಿಭಾಗದ ಸಿಂಧನೂರು ಘಟಕದಲ್ಲಿ 97 ಬಸ್ಸುಗಳಿದ್ದು, ಇವುಗಳಲ್ಲಿ 94 ಬಸ್ಸುಗಳು ಕಾರ್ಯಾಚರಣೆಯಲ್ಲಿದ್ದು, ಇನ್ನುಳಿದ 03 ಬಸ್ಸುಗಳಲ್ಲಿ ಮಾತ್ರ ಸಣ್ಣಪುಟ್ಟ ತಾಂತ್ರಿಕ ದೋಷವಿರುವ ಹಿನ್ನೆಲೆಯಲ್ಲಿ ಸದರಿ ಬಸ್ಸುಗಳನ್ನು ವಿಭಾಗೀಯ ಕಾರ್ಯಾಗಾರದಲ್ಲಿ ದುರಸ್ತಿಗೊಳಿಸುತ್ತಿದ್ದು, ಶೀಘ್ರವೇ ಸುಸ್ಥಿತಿಗೊಳಿಸಿ ಚಾಲನೆಗೊಳಿಸಲಾಗುವುದು. |
| ಆ. | ಸಿಂಧನೂರು ಜಂಕ್ಷನ್‌ನಿಂದ ಬೆಂಗಳೂರು ಹಾಗೂ ಹೈದರಾಬಾದ್‌ಗೆ ತೆರಳುವ ಪ್ರಯಾಣಿಕರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಪ್ರಯಾಣಿಕರಿಗೆ ಅಗತ್ಯ ಬಸ್ಸುಗಳು ಇಲ್ಲದಿರುವುದರಿಂದ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ಯಾವ ಕ್ರಮವನ್ನು ವಹಿಸಲಾಗಿದೆ; | ಸಿಂಧನೂರು ಜಂಕ್ಷನ್‌ನಿಂದ ಬೆಂಗಳೂರಿಗೆ 97 ಸರತಿಗಳು ಹಾಗೂ ಹೈದ್ರಾಬಾದ್‌ಗೆ 21 ಸರತಿಗಳಂತೆ ದಿನದ 24 ಗಂಟೆಯೂ ಸಾರ್ವಜನಿಕ ಪ್ರಯಾಣಿಕರಿಗೆ ತೊಂದರೆಯಾಗದಂತೆ ಬಸ್ಸುಗಳ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ.<br><br>ಇದಲ್ಲದೇ, ಹಬ್ಬ-ಹರಿದಿನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಅನುಕೂಲವಾಗುವಂತೆ ರಾಯಚೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ 08 ಘಟಕಗಳಿಂದ ಹಾಗೂ ಕಲಬುರಗಿ ವಿಭಾಗ-1, ಕಲಬುರಗಿ ವಿಭಾಗ-2, ಬೀದರ್ ಮತ್ತು ಯಾದಗಿರಿ ವಿಭಾಗಗಳಿಂದ ಸಿಂಧನೂರು ಮಾರ್ಗವಾಗಿ ಹೆಚ್ಚುವರಿ ಬಸ್ಸುಗಳನ್ನು ಬೆಂಗಳೂರಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಇದು ಪ್ರಯಾಣಿಕರ ಅವಶ್ಯಕತೆಗನುಗುಣವಾಗಿದ್ದು, ಸಾರಿಗೆ ಸೌಲಭ್ಯಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುತ್ತಿದ್ದಾರೆ. |
| ಇ. | ಸಿಂಧನೂರು ತಾಲ್ಲೂಕಿಗೆ 50 ಹೊಸ ಬಸ್ಸುಗಳ ಅವಶ್ಯಕತೆಯಿದ್ದು, ಯಾವ ಕಾಲಮಿತಿಯೊಳಗೆ ಸರ್ಕಾರದಿಂದ ಹೊಸ ಬಸ್ಸುಗಳನ್ನು ಒದಗಿಸಲಾಗುವುದು? | ನಿಗಮದಲ್ಲಿ **2023-24 ರಿಂದ 2025-26ರವರೆಗೆ ಖರೀದಿಸಿರುವ/ಖರೀದಿ ಹಂತದಲ್ಲಿರುವ** ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:- |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | |

| 2023-24 (Jan) | 2024-25 | 2025-26 | ಒಟ್ಟು |
|---|---|---|---|
| 720 | 307 | 94 | 1121 |

ಮೇಲ್ಕಂಡ ಕೋಷ್ಟಕದನ್ವಯ ಇಲ್ಲಿಯವರೆಗೆ ಸಿಂಧನೂರು ಘಟಕಕ್ಕೆ 22 ಮೊಫ್ಸಿಲ್ ಮತ್ತು 02 ವೋಲ್ವೋ ಎ.ಸಿ. ಸ್ಲೀಪರ್ ಸೇರಿದಂತೆ ಒಟ್ಟು 24 ಬಸ್ಸುಗಳನ್ನು ನೀಡಲಾಗಿದೆ.

ಪ್ರಸ್ತುತ ಸದರಿ ಘಟಕಕ್ಕೆ 16 ಹೊಸ ಬಸ್‌ಗಳ ಅವಶ್ಯಕತೆ ಇದ್ದು, 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಸಾರಿಗೆ ನಿಗಮಗಳಿಗೆ 2000 ಡೀಸಲ್ ಬಸ್ಸುಗಳನ್ನು ಖರೀದಿಸಲು ಯೋಜಿಸಲಾಗಿದ್ದು, ಅದರಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಿಂದ ಖರೀದಿಸಲು ಅನುಮೋದನೆ ನೀಡಲಾಗಿದೆ. ಅದರಂತೆ, ಅನುದಾನ ನಿರೀಕ್ಷಿಸಲಾಗಿದ್ದು, ಅನುದಾನ ದೊರೆತ ನಂತರ ಅವಶ್ಯಕತೆ / ಬೇಡಿಕೆಗನುಗುಣವಾಗಿ ಬಸ್‌ಗಳನ್ನು ಒದಗಿಸಲು ಆದ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಟಿಡಿ 262 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು